ರವಾನೆ ಸಂಖ್ಯೆ: ಆಡಳಿತ/ /2023 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಛೇರಿ,
ಚಾಮರಾಜನಗರ, ದಿನಾಂಕ: **31.08.2023**

# ಕರೆ ಪತ್ರ

ಈ ಕಛೇರಿ ಅಧಿಸೂಚನೆ ಸಂಖ್ಯೆ: ಎಡಿಎಮ್‌ಎನ್/**02/2022**, ದಿನಾಂಕ: **25.10.2022** ರನ್ವಯ ನೀವು ಬೆರಳಚ್ಚುಗಾರರ ಹುದ್ದೆಗೆ ಅರ್ಜಿ ಸಲ್ಲಿಸಿರುವುದರ ಮೇರೆಗೆ, ಸದರಿ ಅಧಿಸೂಚನೆಯಡಿಯಲ್ಲಿ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳಿಗೆ ದಿನಾಂಕ: **10.09.2023, 28.09.2023** ಹಾಗೂ **01.10.2023** ರಂದು ಬೆಳಿಗ್ಗೆ **09.30** ಘಂಟೆಗೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ನಂಜನಗೂಡು ರಸ್ತೆ, ಚಾಮರಾಜನಗರ, ಇಲ್ಲಿ ಮೂಲ ದಾಖಲಾತಿಗಳ ಪರಿಶೀಲನೆ ಹಾಗೂ ಆಂಗ್ಲ ಮತ್ತು ಕನ್ನಡ ಬೆರಳಚ್ಚು ಪರೀಕ್ಷೆಗಳನ್ನು ನಡೆಸಲಾಗುವುದು. ನೀವು ನಿಮಗೆ ನಿಗಧಿಪಡಿಸಿರುವ ದಿನಾಂಕದಂದು ಮಾತ್ರ ಹಾಜರಾಗತಕ್ಕದ್ದು ಹಾಗೂ ಬೇರೆ ದಿನಾಂಕಗಳಂದು ನಿಮಗೆ ಅವಕಾಶವನ್ನು ನೀಡಲಾಗುವುದಿಲ್ಲ. ನಿಮ್ಮ ಸ್ವಂತ ಖರ್ಚಿನಲ್ಲಿ ದಾಖಲಾತಿ ಪರಿಶೀಲನೆ ಹಾಗೂ ಪರೀಕ್ಷೆಗೆ ಹಾಜರಾಗತಕ್ಕದ್ದು.

ಮುಂದುವರೆದು, ಈ ನ್ಯಾಯಾಲಯದ ವೆಬ್ ಸೈಟ್‌ನಲ್ಲಿ ಪ್ರವೇಶ ಪತ್ರವು ಲಭ್ಯವಿದ್ದು, ಅದನ್ನು ಡೌನ್ ಲೋಡ್ ಮಾಡಿಕೊಂಡು ಅದರೊಡನೆ ನಿಮ್ಮ ಆನ್‌ಲೈನ್ ಅರ್ಜಿ ಹಾಗೂ ನೀವು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮೂಲ ದಾಖಲಾತಿಗಳೊಡನೆ ಅವುಗಳ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು, ಒಂದು ವೇಳೆ ಮೂಲ ದಾಖಲಾತಿಗಳ ಪರಿಶೀಲನೆಯ ಸಮಯದಲ್ಲಿ ಸರಿಯಾದ ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದಲ್ಲಿ ಹಾಗೂ ಯಾವುದಾದರೂ ಲೋಪದೋಷಗಳು ಕಂಡುಬಂದಲ್ಲಿ ನಿಮ್ಮನ್ನು ನೇಮಕಾತಿಯ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

ಸೂಚನೆ:

**1.** ಬೆರಳಚ್ಚು- ನಕಲುಗಾರರ ಹುದ್ದೆಗೂ ಸಹ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ದಿನಾಂಕ: **10.09.2023** ಹಾಗೂ **28.09.2023** ರಂದು ಬೆರಳಚ್ಚು ಪರೀಕ್ಷೆಗಳನ್ನು ನಿಗಧಿಪಡಿಸಲಾಗಿದ್ದು, ಸದರಿ ದಿನಗಳಂದು ಎರಡು ಹುದ್ದೆಗಳಿಗೂ ಬೆರಳಚ್ಚು ಪರೀಕ್ಷೆಗಳನ್ನು ಪ್ರತ್ಯೇಕವಾಗಿ ನಡೆಸಲಾಗುವುದು (ಅಂದರೆ ನಿಮಗೆ ನಿಗಧಿಪಡಿಸಿರುವ ದಿನದಲ್ಲೇ ಬೆರಳಚ್ಚುಗಾರರ ಹುದ್ದೆಗೆ ಪ್ರತ್ಯೇಕವಾಗಿ ಹಾಗೂ ಬೆರಳಚ್ಚು - ನಕಲುಗಾರರ ಹುದ್ದೆಗೆ ಪ್ರತ್ಯೇಕವಾಗಿ)

**2.** ಆಂಗ್ಲ ಮತ್ತು ಕನ್ನಡ ಬೆರಳಚ್ಚು ಪರೀಕ್ಷೆಗಳನ್ನು ಕಂಪ್ಯೂಟರ್ ನಲ್ಲಿ ನಡೆಸಲಾಗುವುದು.

**3.** ಕನ್ನಡ ಬೆರಳಚ್ಚು ಪರೀಕ್ಷೆಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇವರು ನಿಗಧಿಪಡಿಸಿರುವ ಸುರಭಿ ಸಾಫ್ಟ್ ವೇರ್ ನಲ್ಲಿ ನಡೆಸಲಾಗುವುದು. (ಕನ್ನಡ **Key board layout** ಈ ಜಿಲ್ಲಾ ನ್ಯಾಯಾಂಗದ ವೆಬ್ ಸೈಟ್ ನಲ್ಲಿನ **online recruitment chamarajanagar** ಇಲ್ಲಿ ಲಭ್ಯವಿರುತ್ತದೆ.

ರವರಿಗೆ:

(ಸಹಿ ಇದೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ.